ಪ್ರಶ್ನೆಪತ್ರಿಕೆ ಕ್ರಮ ಸಂಖ್ಯೆ :
Q.P. Sl. No. :

ಮೇ 2026 ರ ಪರೀಕ್ಷೆ-2
MAY 2026 EXAMINATION-2

A

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12]
Total No. of Printed Pages : 12]

ಒಟ್ಟು ಪ್ರಶ್ನೆಗಳ ಸಂಖ್ಯೆ : 45]
Total No. of Questions : 45]

CCE RF/RR/ PF/PR

ಸಂಕೇತ ಸಂಖ್ಯೆ : 01-K **Code No. : 01-K**

ವಿಷಯ : ಪ್ರಥಮ ಭಾಷೆ — ಕನ್ನಡ

Subject : First Language — KANNADA

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ/ ಖಾಸಗಿ ಪುನರಾವರ್ತಿತ ಅಭ್ಯರ್ಥಿ)
(Regular Fresh / Regular Repeater / Private Fresh/ Private Repeater)

ದಿನಾಂಕ : 18. 05. 2026] [Date : 18. 05. 2026
ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-15 ರವರೆಗೆ] [Time : 10-00 A.M. to 1-15 P.M.
ಗರಿಷ್ಠ ಅಂಕಗಳು : 100] [Max. Marks : 100

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ).*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Cut here/ಇಲ್ಲಿ ಕತ್ತರಿಸಿ

KANNADA

Tear here/ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER WITH REVERSE JACKET
ಹಿಮ್ಮುಖ ಜಾಕೆಟ್ ಹೊಂದಿರುವ ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here/ಇಲ್ಲಿಂದ ಕತ್ತರಿಸಿ

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **6 × 1 = 6**

1. ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು

(ಎ) ಅಲ್ಪಪ್ರಾಣಾಕ್ಷರಗಳು

(ಬಿ) ಮಹಾಪ್ರಾಣಾಕ್ಷರಗಳು

(ಸಿ) ಅನುನಾಸಿಕಾಕ್ಷರಗಳು

(ಡಿ) ಯೋಗವಾಹಗಳು

2. 'ಕಡುವೆಳ್ಪು' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಲೋಪ ಸಂಧಿ

(ಬಿ) ಸವರ್ಣದೀರ್ಘ ಸಂಧಿ

(ಸಿ) ಆದೇಶ ಸಂಧಿ

(ಡಿ) ಗುಣ ಸಂಧಿ

KANNADA

3. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು

(ಎ) ಉದ್ಧರಣ

(ಬಿ) ವಾಕ್ಯವೇಷ್ಟನ

(ಸಿ) ಆವರಣ

(ಡಿ) ವಿವರಣಾತ್ಮಕ

4. 'ಬರೆ' ಧಾತುವಿನ ವಿಧ್ಯರ್ಥಕ ರೂಪ

(ಎ) ಬರೆಯನು

(ಬಿ) ಬರೆಯಳು

(ಸಿ) ಬರೆಯರು

(ಡಿ) ಬರೆಯಲಿ

KANNADA

5. ಚತುರ್ಥೀ ವಿಭಕ್ತಿಯ ಕಾರಕಾರ್ಥವಿದು

(ಎ) ಸಂಪ್ರದಾನ

(ಬಿ) ಅಪಾದಾನ

(ಸಿ) ಸಂಬಂಧ

(ಡಿ) ಅಧಿಕರಣ

6. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಸೇರಿದೆ

(ಎ) ದ್ವಿಗು ಸಮಾಸ

(ಬಿ) ತತ್ಪುರುಷ ಸಮಾಸ

(ಸಿ) ಕ್ರಿಯಾ ಸಮಾಸ

(ಡಿ) ಗಮಕ ಸಮಾಸ

KANNADA

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 × 1 = 4**

7. ವೈಶಾಖ : ಬೇಸಗೆ :: ದ್ಯೂತ : .....

8. ಪರ್ವತ : ರೂಢನಾಮ :: ವಿಜ್ಞಾನಿ : .....

9. ಮ್ಯಾಗ : ಮೇಲೆ :: ಸಕ್ಕಾರಿ : .....

10. ಬಳೆಗಾರ : ತದ್ಧಿತಾಂತನಾಮ :: ಚೆಲುವಿಕೆ : .....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **7 × 1 = 7**

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?

12. ಹುಲಿಗೆ ಪರಮಾನಂದವಾಗಲು ಕಾರಣವೇನು ?

13. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು ?

14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು ?

15. ಕುಂಪಣಿ ಸರಕಾರ ಯಾವ ಆದೇಶವನ್ನು ಹೊರಡಿಸಿತು ?

16. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ?

17. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?

KANNADA

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳಾವುವು ?

19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ?

20. ಮೂಲವರ್ಧ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು ?

21. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ ?

22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

24. ಭಗತ್‌ಸಿಂಗ್‌ನ ತಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯಲು ಕಾರಣವೇನು ?

25. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?

26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ತಿಳಿಸಿ.

27. ರಾಜರ ಪ್ರಕೃತಿ ಹೇಗಿರುತ್ತದೆ ?

KANNADA

V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : **2 × 3 = 6**

28. ದೇವನೂರ ಮಹಾದೇವ

29. ಪಂಪ

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : **1 × 3 = 3**

30. ಗಗನವಬುಧಿಗೆ ಸರಿ ಸರೋವರ
ಜಗಕೆ ಹಿತವನು ಶಕ್ರ ಮನುಜಾ
ದಿಗಳ ಮಾತಾರೂಪು ಗೋವುಗಳಿದು ನಿಧಾನ ಮತ

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : **1 × 3 = 3**

31. "ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು"

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : **1 × 3 = 3**

32. ತಾಳಿದವನು ಬಾಳಿಯಾನು.

ಅಥವಾ

ಬೆಳೆಯುವ ಸಿರಿ ಮೊಳಕೆಯಲ್ಲಿ.

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : **6 × 3 = 18**

33. "ಹುಲಿ ಈಗ ಎಷ್ಟು ಹಸಿದಿರಬೇಕು."

34. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."

35. "ಅಮ್ಮಾ, ನಾನೋರ್ವ ಡಾಕ್ಟರ್. ನಾನು ಆಕೆಯನ್ನು ಪರೀಕ್ಷಿಸಲೇ ?"

KANNADA

36. ''ರೆಕ್ಕೆಗಳೆರಡೂ ಪಕ್ಕದಲುಂಟು''

37. ''ಪಾಂಡವರೊಳಿಹೆದು ಛಲಮನೆ ಮೆಱೆವೆಂ''

38. ''ಹಸುರು ಗದ್ದೆಯಾ ಬಯಲು;''

X. **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

39. ಕಲುಷಿತವಾದೀ .....

.....

.....

..... ಮುಟ್ಟೋಣ

ಅಥವಾ

ಮತಗಳೆಲ್ಲವೂ .....

.....

.....

..... ಬಿತ್ತೋಣ

XI. **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 × 4 = 4**

40. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ

ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ

ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ

ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ

ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು

KANNADA

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

41. ಶ್ರೀರಾಮನ ಆಗಮನದಿಂದ ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಅಥವಾ

ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಗಾಗಿ ದುಃಖಿಸಿದ ಪರಿ ಹಾಗೂ ಪರಸ್ಪರರು ಸಮಾಧಾನ ಮಾಡಿಕೊಂಡ ಬಗೆಯನ್ನು ಸಂಗ್ರಹಿಸಿ ಬರೆಯಿರಿ.

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

ಅಥವಾ

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ಕವಿ ಕುಮಾರವ್ಯಾಸ 'ಕೌರವೇಂದ್ರನ ಕೊಂದೆ ನೀನು' ಪದ್ಯದಲ್ಲಿ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

1 × 4 = 4 (2 + 2)

43. ಮಾನವ ಸೇವೆಯೇ ಮಾಧವನ ಸೇವೆ ಎಂಬುದಾಗಿ ತಿಳಿದಿರುವ ಅಂಗವಿಕಲರ, ಅನಾಥರ, ರೋಗಿಗಳ ಅದರಲ್ಲಿಯೂ ಮುಖ್ಯವಾಗಿ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆಯಲ್ಲಿ ತೃಪ್ತಿ ಕಾಣುತ್ತಿರುವ ಮಹಾನ್ ಸಮಾಜ ಸೇವಕರು ಬಾಬಾ ಆಮ್ಟೆಯವರು. ಇವರು ಮಹಾತ್ಮ ಗಾಂಧೀಜಿಯವರ ನಿಸ್ವಾರ್ಥ ಮನೋಭಾವ ಸೇವಾ ಬದುಕಿನಿಂದ ಬಹಳ ಪ್ರಭಾವಿತರಾದರು. ಅವರ ನಾಯಕತ್ವದಲ್ಲಿ ತೀವ್ರ ರೀತಿಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸದುದ್ದೇಶದಿಂದ ಕಾಂಗ್ರೆಸ್ ಪಕ್ಷವನ್ನು ಸೇರಿದರು. ೧೯೪೨ ರ 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಖಾದಿ ಧರಿಸಿದರು. ತಮ್ಮ ಪಾಲಿನ ಆಸ್ತಿಯನ್ನು ಬಡವರಿಗೆ

KANNADA

ಹಂಚಿದರು. ತಮ್ಮ ವಕೀಲಿ ವೃತ್ತಿಯನ್ನು ಸ್ವಯಂ ಇಚ್ಛೆಯಿಂದ ಬಿಟ್ಟುಕೊಟ್ಟರು. ಸಮಾಜ ಸೇವಾ ಕಾರ್ಯದಲ್ಲಿ ತಮ್ಮನ್ನು ತಾವು ಬಹಳವಾಗಿ ತೊಡಗಿಸಿಕೊಂಡರು.

ಆ ಕಾಲದಲ್ಲಿ ಕುಷ್ಠರೋಗದ ಬಗ್ಗೆ ಕಳಪೆ ಭಾವನೆ ಇತ್ತು. ಅದು ದೈವೀಶಾಪದಿಂದ ಬರುತ್ತದೆ. ಅದರಿಂದ ಮುಕ್ತಿಯೇ ಇಲ್ಲ. ಅದು ಎಂದೆಂದಿಗೂ ವಾಸಿಯಾಗದ ಖಾಯಿಲೆ. ಅವರ ಸಂಪರ್ಕಕ್ಕೆ ಬರುವ ಆರೋಗ್ಯವಂತರಿಗೂ ಆ ಖಾಯಿಲೆ ಅಂಟುತ್ತದೆ. ಇವೇ ಮೊದಲಾದವು ಜನರ ಮನಸ್ಸಿನಲ್ಲಿ ಗಾಢವಾಗಿ ಬೇರೂರಿದ್ದವು. ಕುಷ್ಠರೋಗಿಗಳನ್ನು ಜನರು ಅಸಹ್ಯ ರೀತಿಯಲ್ಲಿ ತುಂಬಾ ತಿರಸ್ಕಾರದಿಂದ ನೋಡುತ್ತಿದ್ದರು. ಈ ಭಯಂಕರ ರೋಗದಿಂದ ನರಳಿ ಸಾಯುವುದನ್ನು ಕಣ್ಣಾರೆ ಕಂಡ ಬಾಬಾ ಆಮ್ಟೆಯವರ ಹೃದಯ ಕರಗಿ ನೀರಾಯಿತು. 'ಆನಂದ ವನ' ಎಂಬ ಹೆಸರಿನಿಂದ ಕರೆಯಲ್ಪಡುವ ಒಂದು ಗುಡಿಸಲು ಕಟ್ಟಿ ಅಲ್ಲಿಯೇ ತಮ್ಮ ಸಂಸಾರ ಸಮೇತ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆ ನಡೆಸಲು ಪ್ರಾರಂಭಿಸಿದರು. ಕುಷ್ಠರೋಗದ ಬಗ್ಗೆ, ಅದಕ್ಕೆ ಸಂಬಂಧಿಸಿದ ಚಿಕಿತ್ಸೆ ಹಾಗೂ ಶುಶ್ರೂಷೆಗಳ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ತಿಳಿದುಕೊಳ್ಳಲು ಕಲ್ಕತ್ತೆಯ ತರಬೇತಿ ಶಾಲೆಯನ್ನು ಸೇರಿ ಆ ಬಗ್ಗೆ ವಿಶೇಷ ತರಬೇತಿ ಪಡೆದರು. ವಾಪಸ್ಸಾದ ನಂತರ 'ಮಹಾರೋಗಿ ಸೇವಾ ಸಮಿತಿ'ಯನ್ನು ಸ್ಥಾಪಿಸಿ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆಯನ್ನು ತುಂಬಾ ವ್ಯವಸ್ಥಿತವಾಗಿ ಆರಂಭಿಸಿದರು.

KANNADA

ಪ್ರಶ್ನೆಗಳು

ಅ) ಬಾಬಾ ಆಮ್ಟೆ ಅವರು ಕುಷ್ಠರೋಗಿಗಳ ಚಿಕಿತ್ಸೆ ಹಾಗೂ ಶುಶ್ರೂಷೆಗೆ ಕೈಗೊಂಡ ಕ್ರಮಗಳಾವುವು ?

ಬ) ಬಾಬಾ ಆಮ್ಟೆ ಅವರು ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರಾದ ಬಗೆಯನ್ನು ತಿಳಿಸಿ.

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **1 × 5 = 5**

44. ನಿಮ್ಮನ್ನು ರಾಮನಗರದ ವಿವೇಕಾನಂದ ಬಡಾವಣೆಯಲ್ಲಿ ವಾಸವಿರುವ 'ಮೋಹಿಷ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಗೆ ಸಾರ್ವಜನಿಕ ಶೌಚಾಲಯವನ್ನು ನಿರ್ಮಾಣ ಮಾಡಿ ಕೊಡುವಂತೆ ಕೋರಿ, ನಗರಸಭೆಯ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೇಹಾ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕುರಿತು, ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿರುವ 'ಜ್ಯೋತಿ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : **1 × 5 = 5**

45. ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ.

ಅಥವಾ

ಶಾಲೆಯಲ್ಲಿ ಭಾಷಾ ಸಂಘದ ಕಾರ್ಯ ಚಟುವಟಿಕೆಗಳು.

KANNADA

DO NOT WRITE ANYTHING HERE